ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

JAS-ANZ BSCIC ISO 14001 REGISTERED

Office of the Chief Engineer,
Communication & Building (North)
Sir M Visvesvaraya Marga,
Dharwad-580001
Mail-pwdn.chief@gmail.com

ಮುಖ್ಯ ಇಂಜಿನೀಯರರ ಕಛೇರಿ,
ಸಂಪರ್ಕ ಮತ್ತು ಕಟ್ಟಡ (ಉತ್ತರ),
ಸರ್ ಎಂ.ವಿಶ್ವೇಶ್ವರಯ್ಯ ಮಾರ್ಗ,
ಧಾರವಾಡ-580001
Phone no-0836-2447900

ISO: 14001:2015: Environmental Management System Certified Office

ಕ್ರ.ಸಂ: ಮುಇಂ(ಉ):ಪ.ಪ.ಸ.ಸಭೆ:ತಾಂಸ-5:ಪೂ.ಅ.ಬಿಡ್:ವಿವಿ:2025-26: No.02140 ದಿನಾಂಕ: 22 JUN 2026

ಮುಖ್ಯ ಇಂಜಿನೀಯರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ ವಲಯ), ಧಾರವಾಡ
ಇವರ ಕಛೇರಿ ಸಭಾಂಗಣದಲ್ಲಿ ದಿನಾಂಕಃ 22.06.2026 ರಂದು ಜರುಗಿದ
ಪೂರ್ವ-ಅರ್ಹತಾ ಬಿಡ್ ಪರಿಶೀಲನಾ ಸಮಿತಿ ಸಭೆಯ ನಡವಳಿಗಳು

***************************

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

| | | | |
|---|---|---|---|
| 1 | ಶ್ರೀ ಶಿವಾನಂದ ಆರ್ ನಾಯ್ಕ್, ಮುಖ್ಯ ಇಂಜಿನೀಯರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ | ... | ಅಧ್ಯಕ್ಷರು |
| 2 | ಶ್ರೀ ಸಂಜೀವಕುಮಾರ ಹುಲಕಾಯಿ, ಅಧೀಕ್ಷಕ ಇಂಜಿನೀಯರರು, ಲೋಇ ವೃತ್ತ, ಬೆಳಗಾವಿ | ... | ಸದಸ್ಯರು |
| 3 | ಶ್ರೀಮತಿ ವಿಮಲಾ ಕಾಳೆ, ಅಧೀಕ್ಷಕ ಇಂಜಿನೀಯರರು (ವಿನ್ಯಾಸ), ಕೇಂದ್ರ ಕಛೇರಿ, ಧಾರವಾಡ | ... | ಸದಸ್ಯರು |
| 4 | ಶ್ರೀ ಸಿ.ಎಸ್.ಪೋಲಿಸ್‌ಪಾಟೀಲ, ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ | ... | ಸದಸ್ಯ ಕಾರ್ಯದರ್ಶಿಗಳು |
| 5 | ಶ್ರೀ ರಾಜೇಂದ್ರ. ಸಿ. ಹುರಕಡ್ಲಿ, ಕಾರ್ಯನಿರ್ವಾಹಕ ಅಭಿಯಂತರರು, (ವಿನ್ಯಾಸ), ಕೇಂದ್ರ ಕಛೇರಿ, ಧಾರವಾಡ | ... | ಸದಸ್ಯರು |
| 6 | ಶ್ರೀ ಸುರೇಶ ನಾಯ್ಕ, ಮುಖ್ಯ ಲೆಕ್ಕಾಧಿಕಾರಿಗಳು, ಕೇಂದ್ರ ಕಛೇರಿ ಧಾರವಾಡ | ... | ಸದಸ್ಯರು |

ಸಭೆಗೆ ಆಗಮಿಸಿದ ಎಲ್ಲ ಅಧಿಕಾರಿಗಳನ್ನು ಮುಖ್ಯ ಇಂಜಿನೀಯರರು, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ ಇವರ ಸ್ವಾಗತದೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ವಿಷಯ ಸೂಚಿ: 2025-26ನೇ ಸಾಲಿನ ಲೆಕ್ಕಶೀರ್ಷಿಕೆ 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು –ಬಂಡವಾಳ ವೆಚ್ಚಗಳು ಅಡಿಯಲ್ಲಿ Construction of Bridge Across Bhima River Near Kadani Village in Sindagi Constituency of Almel Taluka of Vijayapura District.(H/A 5054-03-101-0-02-132 MDR BRIDGE 2025-26).
WI: PWD/2025-26/PREQUAL_TENDER_NUMBER_36

2025-26ನೇ ಸಾಲಿನ ಲೆಕ್ಕಶೀರ್ಷಿಕೆ 5054-03-101-0-02-132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು –ಬಂಡವಾಳ ವೆಚ್ಚಗಳುಅಡಿಯಲ್ಲಿ Construction of Bridge Across Bhima River Near Kadani Village in Sindagi Constituency of Almel Taluka of Vijayapura District. (H/A 5054-03-101-0-02-132 MDR BRIDGE) ಕಾಮಗಾರಿಯು ರೂ.4450.00 ಲಕ್ಷಗಳ ಅಂದಾಜು ಮೊತ್ತಕ್ಕೆ ಸರ್ಕಾರದ ಪತ್ರ ಸಂ: ಲೋಇ 864/IFA/2025 (ಇ-ಕಛೇರಿ) ದಿನಾಂಕಃ 30.07.2025 ರಡಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮತ್ತು ಮುಖ್ಯ ಇಂಜಿನೀಯರರು, ಸಂಪರ್ಕ ಮತ್ತು ಕಟ್ಟಡಗಳು(ಉತ್ತರ), ಧಾರವಾಡ ಇವರ ಕಛೇರಿ ನೋಂದಣಿ ಸಂ: ಸಿಇಆರ್-216 /ಸೆಪ್ಟೆಂಬರ್-2025 ರಲ್ಲಿ ರೂ. 4450.00 ಲಕ್ಷಗಳ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಲಾಗಿರುತ್ತದೆ.

ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರು ತಮ್ಮ ಕಛೇರಿ ಟೆಂಡರ್ ಅಧಿಸೂಚನೆ ಸಂ: 5501 ದಿನಾಂಕಃ 20.03.2025 ರಡಿ ಟೆಂಡರ್ ಪ್ರಕಟಣೆ ಹೊರಡಿಸಿರುತ್ತಾರೆ. ಟೆಂಡರ್ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತಿರುತ್ತವೆ:

1. NIT Published date in e-procurement ... 23.03.2026
2. Last Date for Tender Query ... 02.04.2026
3. Last Date for Receipt of Pre-Qualification Tenders:. ... 10.04.2026
4. Date for Opening of Pre-Qualification Bid ... 13.04.2026

ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರು ವ್ಯಾಪಕ ಪ್ರಚಾರಕ್ಕಾಗಿ ಸದರಿ Pre-Qualification ಟೆಂಡರ್ ಪ್ರಕಟಣೆಯನ್ನು ದಿನಾಂಕಃ 25.03.2025 ರಂದು ಉದಯಕಾಲ, ಪ್ರಜಾಪ್ರಗತಿ ಮತ್ತು ಸಿಟಿಹೈಲೆಟ್ಸ್ ಮತ್ತು ಇಂಡಿಯನ್ ಟ್ರೇಡ್ ಜರ್ನಲ್ ದಿನಪತ್ರಿಕೆಗಳಲ್ಲಿ ಪ್ರಕಟಿಸಿರುತ್ತಾರೆ.

ನಿಗದಿಪಡಿಸಿರುವ ದಿನಾಂಕದವರೆಗೆ ಯಾವುದೇ ಆಕ್ಷೇಪಣೆಗಳು/ ಸ್ಪಷ್ಟೀಕರಣ ಕೋರಿಕೆಗಳು ಸ್ವೀಕೃತವಾಗಿರುವುದಿಲ್ಲವೆಂದು ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರು ತಿಳಿಸಿದರು.

KPPP ಮೂಲಕ Pre-Qualification Bid ಸ್ವೀಕರಿಸುವ ಕೊನೆಯ ದಿನಾಂಕಃ 10.04.2026 ರಂದು ಇದ್ದು, ನಿಗದಿತ ದಿನಾಂಕ ಮತ್ತು ಸಮಯದೊಳಗಾಗಿ Pre-Qualification ಟೆಂಡರ್ ಪ್ರಕಟಣೆಗೆ ಸ್ಪಂಧಿಸಿ ಒಟ್ಟು ಎರಡು ( JV: VEERAYYA HIREMATH (CHIDU INFRATECH PRIVATE LIMITED) (51%) & JAYASHEEL NARAYAN SHETTY (1)( JNS INFRA PROJECTS PRIVATE LIMITED )(49%) ಹಾಗೂ D.Sudhakar Shetty (MUGRODY CONSTRUCTION) (UDAYSHIVAKUMAR INFRA PRIVATE LIMITED) ಬಿಡ್‌ಗಳು ಸ್ವೀಕೃತವಾಗಿದ್ದು, ದಿನಾಂಕಃ 13.04.2026 ರಂದು ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರು Pre-Qualification Bid ಗಳನ್ನು ತೆರೆದಿರುತ್ತಾರೆ. ಸ್ವೀಕೃತಗೊಂಡ ಬಿಡ್‌ಗಳ ಬಿಡ್‌ದಾರರ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾಗಿದೆ.

| ಕ್ರ. ಸಂ. | ಭಾಗವಹಿಸಿರುವ ಬಿಡ್‌ದಾರರ ಹೆಸರು |
|---|---|
| 1. (Joint Venture) | SHRI. VEERAYYA HIREMATH (CHIDU INFRATECH PRIVATE LIMITED) (51%) |
| | SHRI. JAYASHEEL NARAYAN SHETTY (1)( JNS INFRA PROJECTS PRIVATE LIMITED )(49%) |
| 2. | SHRI .D.Sudhakar Shetty (MUGRODY CONSTRUCTION) (UDAYSHIVAKUMAR INFRA PRIVATE LIMITED) |

ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರು ಮೇಲೆ ತಿಳಿಸಿರುವಂತೆ ತೆರೆದಿರುವ Pre-Qualification Bid ಗಳ ಎರಡು ಜನ ಬಿಡ್‌ದಾರರು KPPP ಮೂಲಕ ಅಪ್‌ಲೋಡ್ ಮಾಡಿ ಸಲ್ಲಿಸಿರುವ ದಾಖಲೆಗಳನ್ನು ಮಾತ್ರ ಡೌನ್‌ಲೋಡ್ ಮಾಡಿ ಮುದ್ರಿಸಿ, Standard Tender Document K/W-6 ರನ್ವಯ Pre-Qualification ಅರ್ಹತೆ ನಿಯಮಗಳಿಗೆ ಅನುಗುಣವಾಗಿ ಬಿಡ್‌ದಾರರ ವಿವರಗಳನ್ನು Pre-Qualification Bid ಮೌಲ್ಯಮಾಪನ ನಮೂನೆಯಲ್ಲಿ ಭರ್ತಿ ಮಾಡಿ ಅಧೀಕ್ಷಕ ಇಂಜಿನೀಯರರು, ಲೋಇ ವೃತ್ತ, ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ರವರು ಶಿಫಾರಸ್ಸು ಮಾಡಿರುವ ಪ್ರತಿಗಳು ಹಾಗೂ ಎಲ್ಲ ದಾಖಲೆ ಪ್ರತಿಗಳನ್ನು ಪೂರ್ವ-ಅರ್ಹತಾ ಬಿಡ್ ಪರಿಶೀಲನಾ ಸಮಿತಿ ಸಭೆಯ ಮುಂದೆ ಮಂಡಿಸಿದರು.

ಪೂರ್ವ-ಅರ್ಹತಾ ಬಿಡ್ ಪರಿಶೀಲನಾ ಸಮಿತಿಯು ಎರಡು ಜನ ಬಿಡ್‌ದಾರರ ತಾಂತ್ರಿಕ ಬಿಡ್‌ಗಳ ಪರಿಶೀಲನೆ ಮಾಡಲು ನಿರ್ಧರಿಸಿತು.

ಪೂರ್ವ-ಅರ್ಹತಾ ಬಿಡ್ ಪರಿಶೀಲನಾ ಸಮಿತಿಯು Standard Tender Document K/W-6 GITA Sub-Clauses, Clause 4.7(b) Annual Turnover, Clause 4.8 Satisfactorily completion, as a prime contractor, at least one similar work, Clause 4.8 Executed Quantities, Clause 4.9 Liquid Assets/availability of credit facilities, Clause 4.12 Personnel Capabilities, Clause 4.13 Equipment Capabilities ಅರ್ಹತಾ ಮಾನದಂಡಗಳನ್ವಯ ಪ್ರತಿ ಬಿಡ್‌ದಾರರು ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಅರ್ಹತೆ ಹೊಂದಿರಬೇಕಾಗಿದ್ದು, ಸದರಿಯವರು ಸಲ್ಲಿಸಿರುವ ಸಮರ್ಥನೀಯ ದಾಖಲೆಗಳು ಹಾಗೂ ಅಧೀಕ್ಷಕ ಇಂಜಿನೀಯರರು, ಲೋಇ ವೃತ್ತ, ಬೆಳಗಾವಿ ಮತ್ತು ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ,

ವಿಜಯಪುರ ರವರು ಸಲ್ಲಿಸಿರುವ ತಾಂತ್ರಿಕ ಬಿಡ್ ಮೌಲ್ಯ ಮಾಪನಾ ಶಿಫಾರಸ್ಸನ್ನು ಹಾಗೂ ಗುತ್ತಿಗೆ ಮಾನ್ಯತಾ ಅವಧಿ ಕುರಿತು ಪರಿಶೀಲಿಸಿ ಈ ಕೆಳಗಿನಂತೆ ಸಭೆಯು ತೀರ್ಮಾನಿಸಿತು.

1 JV: SHRI. VEERAYYA HIREMATH (CHIDU INFRATECH PRIVATE LIMITED) (51%) & SHRI. JAYASHEEL NARAYAN SHETTY (1)( JNS INFRA PROJECTS PRIVATE LIMITED )(49%)

ಅಧೀಕ್ಷಕ ಇಂಜಿನೀಯರರು ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು ಇವರ ಶಿಫಾರಸ್ಸಿನಂತೆ ಹಾಗೂ ಸಮಿತಿಯ ಮುಂದೆ ಮಂಡಿಸಿದ ದಾಖಲೆಗಳನ್ವಯ ಸದರಿ ಗುತ್ತಿಗೆದಾರರು ಎಲ್ಲ ನಿಗದಿತ Pre-Qualification ಅರ್ಹತೆಯನ್ನು ಹೊಂದಿದ್ದು, Pre-Qualification ನಲ್ಲಿ ಅರ್ಹರಾಗಿರುತ್ತಾರೆ ಎಂದು ಸಭೆಯು ತಿರ್ಮಾನಿಸಿತು.

2 SHRI .D.Sudhakar Shetty (MUGRODY CONSTRUCTION) (UDAYSHIVAKUMAR INFRA PRIVATE LIMITED)

ಅಧೀಕ್ಷಕ ಇಂಜಿನೀಯರರು ಹಾಗೂ ಕಾರ್ಯನಿರ್ವಾಹಕ ಇಂಜಿನೀಯರರು ಇವರ ಶಿಫಾರಸ್ಸಿನಂತೆ ಹಾಗೂ ಸಮಿತಿಯ ಮುಂದೆ ಮಂಡಿಸಿದ ದಾಖಲೆಗಳನ್ವಯ ಸದರಿ ಗುತ್ತಿಗೆದಾರರು ಎಲ್ಲ ನಿಗದಿತ Pre-Qualification ಅರ್ಹತೆಯನ್ನು ಹೊಂದಿದ್ದು, Pre-Qualification ನಲ್ಲಿ ಅರ್ಹರಾಗಿರುತ್ತಾರೆ ಎಂದು ಸಭೆಯು ತಿರ್ಮಾನಿಸಿತು.

ಪೂರ್ವ-ಅರ್ಹತಾ ಬಿಡ್ ಪರಿಶೀಲನಾ ಸಮಿತಿಯು, ಮೇಲೆ ತಿಳಿಸಿರುವ ಸಮಿತಿಯ ತೀರ್ಮಾನಗಳಂತೆ ಮೇಲಿನ ಬಿಡ್‌ದಾರರನ್ನು Pre-Qualification ನಲ್ಲಿ ಅರ್ಹರೆಂದು ಪರಿಗಣಿಸಿ ನಿಯಮಾನುಸಾರ ಮುಂದಿನ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಸೂಚಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
(ಸುರೇಶ ನಾಯ್ಕ. ಬಿ)
ಮುಖ್ಯ ಲೆಕ್ಕಾಧಿಕಾರಿಗಳು,
ಕೇಂದ್ರ ಕಛೇರಿ ಧಾರವಾಡ

ಸಹಿ/-
(ರಾಜೇಂದ್ರ. ಸಿ. ಹುರಕಡ್ಲಿ,)
ಕಾರ್ಯನಿರ್ವಾಹಕ ಅಭಿಯಂತರರು,
(ವಿನ್ಯಾಸ), ಕೇಂದ್ರ ಕಛೇರಿ, ಧಾರವಾಡ

ಸಹಿ/-
(ಸಿ.ಎಸ್.ಪೋಲಿಸ್‌ಪಾಟೀಲ)
ಕಾರ್ಯನಿರ್ವಾಹಕ ಇಂಜಿನೀಯರರು,
ಲೋಇ ವಿಭಾಗ, ವಿಜಯಪುರ

ಸಹಿ/-
(ಶ್ರೀಮತಿ ವಿಮಲಾ ಕಾಳೆ)
ಅಧೀಕ್ಷಕ ಇಂಜಿನೀಯರರು (ವಿನ್ಯಾಸ),
ಕೇಂದ್ರ ಕಛೇರಿ, ಧಾರವಾಡ

ಸಹಿ/-
(ಸಂಜೀವಕುಮಾರ ಹುಲಕಾಯಿ)
ಅಧೀಕ್ಷಕ ಇಂಜಿನೀಯರರು,
ಲೋಇ ವೃತ್ತ, ಬೆಳಗಾವಿ

ಸಹಿ/-
(ಶಿವಾನಂದ ಆರ್ ನಾಯ್ಕ)
ಅಧ್ಯಕ್ಷರು ಹಾಗೂ ಮುಖ್ಯ ಇಂಜಿನೀಯರರು,
ಸಂಪರ್ಕ ಮತ್ತು ಕಟ್ಟಡಗಳು (ಉತ್ತರ), ಧಾರವಾಡ

ಪ್ರತಿಯನ್ನು ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, 3ನೇ ಮಹಡಿ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ಪ್ರತಿಯನ್ನು ಅಧೀಕ್ಷಕ ಇಂಜಿನೀಯರರು, ಲೋಇ ವೃತ್ತ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಇ ವಿಭಾಗ, ವಿಜಯಪುರ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಪ್ರತಿಯನ್ನು ಕೇಂದ್ರ ಕಛೇರಿಯ ಸಮಿತಿಯ ಸದಸ್ಯರುಗಳಿಗೆ/ ತಾಂತ್ರಿಕ ಸಹಾಯಕರು-05/ ವಿಷಯ ನಿರ್ವಾಹಕರು ಇವರಿಗೆ ಮಾಹಿತಿಗಾಗಿ ಕೊಡಲಾಗಿದೆ.

ಮುಖ್ಯ ಇಂಜಿನೀಯರರು,
ಸಂಪರ್ಕ ಮತ್ತು ಕಟ್ಟಡ (ಉತ್ತರ), ಧಾರವಾಡ